ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:1109/2020

ಚಾಸಾ:1 ಪ್ರಾಸಾ:1

ದಿನಾಂಕ: 29.01.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ರಾಮಕೃಷ್ಣ ಹೊಳ್ಳ |
| ತಂದೆಯ ಹೆಸರು | : | ವೆಂಕಟರಮಣ ಹೊಳ್ಳ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ರಿಕ್ಷಾ ಚಾಲಕ |
| ವಾಸ ಸ್ಥಳ | : | ಕಂಚುಗೋಡು |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:</u>**

ದಿ: 21-10-2019 ರಂದು ನನ್ನ ಬಾಬ್ತು ಕೆಎ-20-2012 ಅಟೋವನ್ನು ತ್ರಾಸಿಯ ಅಟೋ ನಿಲ್ದಾಣದಲ್ಲಿ ನಿಲ್ಲಿಸಿಕೊಂಡಿದ್ದಾಗ ಮಧ್ಯಾಹ್ನ 3-30ರ ಸಮಯದಲ್ಲಿ ಅಲ್ಲಿ ಒಂದು ಅಪಘಾತವು 20 ಮೀಟರ್ ದೂರದಲ್ಲಿ ಆಗಿರುತ್ತದೆ. ಕುಂದಾಪುರದಿಂದ ಬೈಂದೂರು ಕಡೆಗೆ ಹೋಗುತ್ತಿದ್ದ ಒಂದು ಟ್ಯಾಂಕರ್ ಅತೀ ವೇಗವಾಗಿ ಬಂದು ರಸ್ತೆಯ ಬದಿಯಲ್ಲಿ ರಸ್ತೆ ದಾಟಲು ನಿಂತಿದ್ದ ಸೀತಾರಾಮ ಐತಾಳ್ ರವರಿಗೆ ಡಿಕ್ಕಿಪಡಿಸಿರುತ್ತದೆ. ಅಪಘಾತವನ್ನು ಕಂಡು ನಾನು ಹೋಗಿ ನೋಡಿದಾಗ ಸದ್ರಿ ವ್ಯಕ್ತಿ ನನ್ನ ಪರಿಚಯಸ್ಥರಾಗಿರುತ್ತಾರೆ. ಆತನ ತಲೆ, ಬೆನ್ನು ಮತ್ತು ಕಾಲಿಗೆ ರಕ್ತಗಾಯಗಳಾಗಿದ್ದು, ಆತನನ್ನು ಕುಂದಾಪುರದ ಚಿನ್ಮಯಿ ಆಸ್ಪತ್ರೆಗೆ ದಾಖಲಿಸಿರುತ್ತೇವೆ. ನಂತರ ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಕೆಎಂಸಿ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ಸದ್ರಿ ಡಿಕ್ಕಿಪಡಿಸಿದ ಗಾಡಿ ಸಂಖ್ಯೆ ಕೆಎ-19-ಎಸಿ-1285 ಆಗಿರುತ್ತದೆ. ಅದರ ಚಾಲಕ ಕಾರ್ತಿಕ್ ಎಂದು ದೂರು ಬರೆಯುವ ವೇಳೆಗೆ ತಿಳಿದು ಬಂದಿರುತ್ತದೆ.

ಮಾರನೇ ದಿನ ಮಧ್ಯಾಹ್ನ ಪೊಲೀಸರು ಪಂಚನಾಮೆ ಜರುಗಿಸಿದ್ದು ಸ್ಥಳಕ್ಕೆ ಬಂದಾಗ ಚಾಸಾ-2

ಮತ್ತು 9 ರವರು ಹಾಜರು ಇದ್ದು, ಕ್ರಮವನ್ನು ಮಧ್ಯಾಹ್ನ ಜರುಗಿಸಿರುತ್ತಾರೆ. ಅಪಘಾತಪಡಿಸಿದ ವಾಹನವನ್ನು ಅಲ್ಲಿಂದ ವಶಕ್ಕೆ ಪಡೆದಿರುತ್ತಾರೆ. ಅನಂತರ ಫೋಟೋ ತೆಗೆದಿರುತ್ತಾರೆ.

ಮರುದಿನ ಆತ ಮೃತಪಟ್ಟಿರುವುದಾಗಿ ನನಗೆ ತಿಳಿದು ಬಂದಿರುತ್ತದೆ. ಈ ವಿಚಾರವಾಗಿ ನಾನು ಹೇಳಿಕೆ ನೀಡಿರುತ್ತೇನೆ. ಸದ್ರಿ ದಿನ ನಾನು ಅಪಘಾತಪಡಿಸಿದ ವಾಹನದ ಚಾಲಕನನ್ನು ನೋಡಿರುವುದಿಲ್ಲ. ನಾನು ಎಂದಿಗೂ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಈ ಹಿಂದೆ ನೋಡಿರುವುದಿಲ್ಲ.

ಸಾಕ್ಷಿಗೆ ದೂರು, ಸ್ಥಳ ಪಂಚನಾಮೆ, ನಕ್ಷೆಯನ್ನು ತೋರಿಸಲಾಗಿದ್ದು, ಅವುಗಳಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಸದ್ರಿ ದಾಖಲೆಗಳನ್ನು ನಿಪಿ-1 ರಿಂದ 3 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ರಿಂದ 3(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಫೋಟೋ ತೋರಿಸಲಾಗಿದ್ದು ಅದನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಟ್ಯಾಂಕರ್ ನ ಒಂದು ಫೋಟೋವನ್ನು ತೋರಿಸಿದ್ದು ಅದನ್ನು ನೋಡಿ ಗುರುತಿಸಿದ ಮೇರೆಗೆ ಸದ್ರಿ ಫೋಟೋವನ್ನು ನಿಪಿ-5 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ಭಾಗಶಃ ವಿರುದ್ಧವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ವಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ**

ಸದ್ರಿ ದಿನ ಆರೋಪಿ ಅತೀ ವೇಗ ಹಾಗೂ ಅಜಾಗರೂಕತೆಯಿಂದ ವಾಹನವನ್ನು ಚಲಾಯಿಸಿಕೊಂಡು ಬಂದಿರುತ್ತಾನೆ ಎಂದರೆ ಸರಿ. ಅಪಘಾತಪಡಿಸಿದ ವಾಹನವು ಸ್ಥಳದಿಂದ ಸ್ವಲ್ಪ ದೂರ ನಿಲ್ಲಿಸಿದ್ದು ಆ ವೇಳೆ ಚಾಲಕನಾಗಿದ್ದ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನಾನು ಸ್ಥಳದಲ್ಲಿಯೇ ನೋಡಿರುತ್ತೇನೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಸಂಜೆ 4-45 ರಿಂದ 5-30ರವರೆಗೂ ಬರೆದಿರುತ್ತಾರೆ ಎಂದರೆ ಸರಿ. ಆರೋಪಿಯೇ ಅಪಘಾಪಡಿಸಿದ್ದನ್ನು ಕಂಡಿದ್ದರೂ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ವಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಪಿ ಎನ್ ಎಸ್ ರವರಿಂದಃ**

ಅಪಘಾತದ ಸ್ಥಳದಿಂದ ಗಂಗೊಳ್ಳಿ ಠಾಣೆ 1 ¼ ಕಿ.ಮೀ ದೂರದಲ್ಲಿ ಇರುತ್ತದೆ. ಅಪಘಾತವಾದ ಸಂಜೆ 6-30ರ ಸಮಯದಲ್ಲಿ ಠಾಣೆಗೆ ಹೋಗಿರುತ್ತೇವೆ. ಗಾಯಾಳುವನ್ನು ಸ್ಥಳಾಂತರಗೊಳಿಸಿದ ನಂತರ ಪೊಲೀಸರು ಸ್ಥಳಕ್ಕೆ ಬಂದಿರಬಹುದು ನನಗೆ ತಿಳಿದಿಲ್ಲ. ಘಟನಾ ಸ್ಥಳದಲ್ಲಿ ವಾಹನದ ವಿವರಗಳನ್ನು ಚಾಸಾ-2ರವರು ಪೊಲೀಸರಿಗೆ ನೀಡಿರುತ್ತಾರೆ. ನಮ್ಮ ಅಟೋ ನಿಲ್ದಾಣದಿಂದ ಅಪಘಾತದ ಸ್ಥಳ ಸುಮಾರು 70 ಅಡಿ ದೂರದಲ್ಲಿದೆ. ಅಲ್ಲಿಂದ ಬಸ್ಸು ನಿಲ್ದಾಣಕ್ಕೆ ಸುಮಾರು 40 ಅಡಿ ದೂರದಲ್ಲಿದೆ. ತ್ರಾಸಿ ಜಂಕ್ಷನ್ ವಾಹನ ಧಟ್ಟಣೆಯ ಹಾಗೂ ಜನನಿಭಿಡ ಸ್ಥಳ ಎಂದರೆ ಸರಿ. ಅಲ್ಲಿ ವಾಹನಗಳು ನಿಧಾನವಾಗಿ ಚಲಿಸಬೇಕೆಂಬ ಉದ್ದೇಶದಿಂದ ಕುಂದಾಪುರದ ಮಾರ್ಗದಲ್ಲಿ ಬ್ಯಾರಿಕೇಡನ್ನು ಅಪಘಾತದ ಸ್ಥಳದಿಂದ ಹಿಂದಕ್ಕೆ ಅಳವಡಿಸಲಾಗಿದೆ ಎಂದರೆ ಸಾಕ್ಷಿಯು ಸದ್ರಿ ಬ್ಯಾರಿಕೇಡನ್ನು ಜಂಕ್ಷನಲ್ಲಿ ಅಳವಡಿಸಲಾಗಿದೆ ಎಂದು ನುಡಿಯುತ್ತಾರೆ. ಅಲ್ಲಿ ಒಂದು ಬ್ಯಾರಿಕೇಡು ಅಳವಡಿಸಲಾಗಿತ್ತು. ಆದ್ದರಿಂದ ಎಲ್ಲಾ ವಾಹನಗಳು ನಿಧಾನವಾಗಿ ಚಲಿಸಬೇಕು ಎಂದರೆ ಸರಿ.

ನಾನು ಮೇಲೆ ಹೇಳಿದ ಟ್ಯಾಂಕರ್ ಪೆಟ್ರೋಲ್ ತುಂಬಿಸಿದ ಲಾರಿ ಎಂದರೆ ಸರಿ. ಅದನ್ನು ವೇಗವಾಗಿ ಚಲಾಯಿಸಿ ಬ್ರೇಕ್ ಹಾಕಿದರೆ ಮುಗುಚಿ ಬೀಳುವ ಸಾಧ್ಯತೆ ಇದೆ ಎಂದರೆ ಸರಿ. ನಾನು ಸದ್ರಿ ಟ್ಯಾಂಕರನ್ನು ಅಪಘಾತವಾಗುವ ವೇಳೆಗೆ ನೋಡಿರುತ್ತೇನೆ. ಮೃತ ಸೀತಾರಾಮ ಐತಾಳ್ ರವರು ರಸ್ತೆ ದಾಟುತ್ತಿದ್ದರು. ಆತ ಬಸ್ಸು ನಿಲ್ದಾಣದಿಂದ ಪೂರ್ವ ಬದಿಗೆ ಹೋಗುತ್ತಿದ್ದ ವ್ಯಕ್ತಿ. ನನ್ನ ಪ್ರಕಾರ ಟ್ಯಾಂಕರ್ ನ ಎಡ ಭಾಗ ಆತನಿಗೆ ತಾಗಿರುತ್ತದೆ. ಆ ವೇಳೆಗೆ ಟ್ಯಾಂಕರ್ ನ ಹಿಂದೆ ಒಂದು ಗಾಡಿ ಸ್ವಲ್ಪ ದೂರದಲ್ಲಿ ಬರುತ್ತಿತ್ತು. ಸದ್ರಿ ರಸ್ತೆ ಸುಮಾರು 30 ಅಡಿ ಇರಬಹುದು. ಪಶ್ಚಿಮದ ಅಂಚಿನಿಂದ ಸದ್ರಿ ಅಪಘಾತ 12 ಅಡಿ ಪೂರ್ವಕ್ಕೆ ಆಗಿರುತ್ತದೆ. ಟ್ಯಾಂಕರ್ ಗೆ ಯಾವುದೇ ಜಖಂ ಆಗಿರಲಿಲ್ಲ.

ನಾನು ಸ್ಥಳಕ್ಕೆ ಹೋಗುವ ವೇಳೆಗೆ 7-8 ಜನರು ಇದ್ದರು. ಅಲ್ಲಿದ್ದ ಜನರೆಲ್ಲಾ ಸೇರಿ ಆತನನ್ನು ಚಿಕಿತ್ಸೆಗೆ ಕಳುಹಿಸಿರುತ್ತಾರೆ. ಟ್ಯಾಂಕರನ್ನು ಅಲ್ಲಿಂದ ಪೊಲೀಸ್ ಠಾಣೆಗೆ ಯಾರು ತೆಗೆದುಕೊಂಡು ಹೋಗಿದ್ದರು ಎಂದು ನನಗೆ ಗೊತ್ತಿಲ್ಲ. ಅಪಘಾತದ ಸ್ಥಳದಿಂದ 10 ರಿಂದ 15 ಅಡಿ ದೂರದಲ್ಲಿ ಟ್ಯಾಂಕರನ್ನು ನಿಲ್ಲಿಸಲಾಗಿತ್ತು.ಅಪಘಾತವಾದ ನಂತರ ನಾನು ನನ್ನ ಅಟೋ ಬಾಡಿಗೆಯನ್ನು

ಮುಂದುವರೆಸಿರುತ್ತೇನೆ. ನಾನು ಪೊಲೀಸ್ ಠಾಣೆಗೆ ಸಂಜೆ 6-30ಕ್ಕೆ ಹೋಗಿರುತ್ತೇನೆ. ಮೃತ ಸೀತಾರಾಮ ಐತಾಳರವರ ಸಂಬಂಧಿಕರು ನನಗೆ ಪರಿಚಯಸ್ಥರಾಗಿರುತ್ತಾರೆ, ಆದ್ದರಿಂದ ಅವರು ಸೂಚಿಸಿದಂತೆ ನಾನು ದೂರು ನೀಡಿರುತ್ತೇನೆ. ಮೃತ ಸೀತಾರಾಮ ಐತಾಳರವರು ರಸ್ತೆ ದಾಟದಿದ್ದರೆ ಅಪಘಾತವಾಗುತ್ತಿರಲಿಲ್ಲ ಎಂದರೆ ಇರಬಹುದು.

ಆರೋಪಿಯನ್ನು ಇದೇ ಮೊದಲ ಬಾರಿಗೆ ನೋಡಿರುತ್ತೇನೆ. ದೂರನ್ನು ನೀಡಿದ ನಂತರ ಪೊಲೀಸರನ್ನು ಮರುದಿನ ಭೇಟಿ ಮಾಡಿರುತ್ತೇನೆ. ಆಗ ಸಂಜೆ 4-30 ಆಗಿತ್ತು. ಅವರು ಸೂಚಿಸಿದಂತೆ ನಾನು ಸ್ಥಳಕ್ಕೆ ಹೋಗಿರುತ್ತೇನೆ. ಅನಂತರ ಪಂಚನಾಮೆಗೆ ಸಹಿ ಮಾಡಿರುತ್ತೇನೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**